ವಾರದ ಪತ್ರ

## ಕ್ರೌರ್ಯ ಇಲ್ಲದೆಯೂ ವಿಲನ್ ಸಾಧ್ಯ

ಕಲರ್ಸ್ ಕನ್ನಡದ 'ನಂದಗೋಕುಲ' ಇದ್ದಿದ್ದರಲ್ಲಿ ಪರವಾಗಿಲ್ಲ ಎಂದು ಅನ್ನಿಸಿದೆ. ಅದಕ್ಕೆ ಮುಖ್ಯ ಕಾರಣ ಕಥೆ ಮಧ್ಯಮ ವರ್ಗವನ್ನು ಕೇಂದ್ರೀಕರಿಸಿದೆ. ಬೇರೆ ಕಥೆಗಳಂತೆ ಇಲ್ಲಿ ಶ್ರೀಮಂತಿಕೆಯ ಥಳಕು ಬಳಕು ಇಲ್ಲ. ತಾನು ಪ್ರೀತಿಸಿ ಮದುವೆಯಾದ ನಂತರ ಪಟ್ಟ ಕಷ್ಟ ತನ್ನ ಮಕ್ಕಳಿಗೆ ಬಾರದಿರಲಿ ಎಂದು ಯೋಚಿಸುತ್ತಾನೆ. ಅದು ಸರಿ ಅನ್ನಿಸಿದರೂ, ಆ ಕಾರಣಕ್ಕೆ ಮಕ್ಕಳನ್ನು ತುಂಬ ಕಟ್ಟುನಿಟ್ಟಾಗಿ ಬೆಳೆಸುವುದು ಉಚಿತವಾದ ನಡೆಯಲ್ಲ. ನಂದಕುಮಾರನ ಈ ನಿರ್ಧಾರ ಕ್ರಮೇಣ ಸಡಿಲುಗೊಳ್ಳುವುದನ್ನು ಈ ಧಾರಾವಾಹಿಯಲ್ಲಿ ಕಾಣಬಹುದು. ಇದರ ಇನ್ನೊಂದು ವೈಶಿಷ್ಟ್ಯವೇನೆಂದರೆ, ಕುಟುಂಬಕ್ಕೆ ಕೇಡು ಬಗೆಯುವ ಮತ್ತು ಸುಪಾರಿ ಕೊಟ್ಟು ತನ್ನ ಕುಟುಂಬದ ಸದಸ್ಯರನ್ನು ಕೊಲ್ಲುವ ಸಂಚು ರೂಪಿಸುವ ಖಳನಾಯಕಿ ಇಲ್ಲ. ಗಿರಿಜಾಳ ಚಿಕ್ಕ ಅತ್ತಿಗೆ ಖಳನಾಯಕಿ ಅನ್ನಿಸಿದರೂ ಸೌಮ್ಯ ಸ್ವಭಾವವಿದೆ.

—ಮುರಲೀಧರ ಕುಲಕರ್ಣಿ, ಬೀದರ್

## ಕನ್ನಡ ಕಥೆಗೆ ಬರ!

ನಮ್ಮ ಟೀವಿ ವಾಹಿನಿಗಳಿಗೆ ಹೊಸತನ್ನು ಮಾಡುವ ಇರಾದೆಯೇ ಇಲ್ಲ. ನಾ ಕಂಡಂತೆ ಕಲರ್ಸ ಎರಡು ಚಾನಲಿನಲ್ಲಿ ಮಧ್ಯಾಹ್ನದ ವೇಳೆ ಬೇರೆ ಭಾಷೆಯ ಕಥೆಗಳು ಬರುತ್ತವೆ. ಅವು ಇಲ್ಲಿನ ನಡೆಗೂ ಮತ್ತು ಪಾತ್ರಗಳ ದೇಹ ಭಾಷೆಗೂ ಹೊಂದಿಕೆ ಆಗುವುದಿಲ್ಲ. ದಿನವಿಡೀ ಹಳೇ ಸಿಲ್ಲಿ ಸಿಲ್ಲಿ ಪ್ರಸಂಗಗಳು ಮತ್ತು ಮಜವೇ ಇಲ್ಲದ ಭಾರತ ಇದರ ಜೊತೆಗೆ ಅಡುಗೆ ರಸಾಯನ. ಕನ್ನಡಕ್ಕೆ ಇಷ್ಟೊಂದು ಬರವೇ ಎಂದು ಅನ್ನಿಸುತ್ತದೆ.

—ಕೆ.ಎಸ್. ಸೋಮೇಶ್ವರ

## ಭಾಗ್ಯಳಿಗೆ ವಿರಾಮ ನೀಡಬಾರದೆ?

ಕಲರ್ಸ್‌ನಲ್ಲಿ ಸರ್ವಗುಣ ಸಂಪನ್ನೆ 'ಭಾಗ್ಯಲಕ್ಷ್ಮೀ'ಯನ್ನು ಕಾರಣವಿಲ್ಲದೆ ಎಳೆಯುತ್ತಿದ್ದಾರೆ. ಭಾಗ್ಯಳನ್ನು ಸರ್ವಗುಣ ಸಂಪನ್ನೆ ಸ್ವರೂಪದಲ್ಲಿ ಚಿತ್ರಿಸಿದ್ದಾರೆ. ಪ್ರತಿರೋಧ ವ್ಯಕ್ತಪಡಿಸಬೇಕಾದ ಅನೇಕ ಸಂದರ್ಭದಲ್ಲಿಯೂ ಆಕೆಯನ್ನು ಸಹಿಷ್ಣಾಶೀಲಳಂತೆ ಮೆರೆಸುತ್ತಾರೆ. ಆ ಭರದಲ್ಲಿ ಉಳಿದ ಪಾತ್ರಗಳು ಸೊರಗಿದಂತೆ ಕಾಣುತ್ತವೆ. ಕಥೆಯಲ್ಲಿ ಒಂದು ಭಾಗ ಅತಿಯಾಗಿ ಬೆಳೆದರೆ ನೋಡಲು ಏನು ಸೊಗಸು ಉಳಿಯುತ್ತದೆ. 'ಹೊಟ್ಟೆ ಡುಮ್ಮಣ್ಣ ಕೈಕಾಲು ಸಣ್ಣಣ್ಣ' ಎನ್ನುವಂತೆ ಯಾವುದೋ ಒಂದು ಭಾಗವನ್ನು ಪುಷ್ಟಿಗೊಳಿಸಿದರೆ ಕಥೆಯ ಉಳಿದ ಭಾಗವನ್ನು ಉದಾಸೀನ ಮಾಡಿದಂತೆ ಅನ್ನಿಸುತ್ತದೆ. ದಯವಿಟ್ಟು ಧಾರಾವಾಹಿಗೆ ಮುಕ್ತಾಯ ಹಾಡಿ

—ಮುಕ್ತಾ ಸಿ.ಎನ್.

## ಮಣ್ಣು ತಿಂದರೂ ಮರೆಯಲ್ಲಿ ತಿನ್ನಬೇಕು!

ಸುವರ್ಣ ನ್ಯೂಸ್ 'ಹೋಮ್ ಮಿನಿಸ್ಟರ್' ಕಾರ್ಯಕ್ರಮದಲ್ಲಿ ಜನ ಮೆಚ್ಚಿದ ಕಾಯಂ ಮುಖ್ಯಮಂತ್ರಿ ಚಂದ್ರು ಅವರ ಪರಿಚಯ ಚೆನ್ನಾಗಿ ಮೂಡಿಬಂತು. ಗುಲಗಂಜಿಯಲ್ಲಿ ಕಪ್ಪು ಚುಕ್ಕೆ ಇರುವಂತೆ ಕಾರ್ಯಕ್ರಮದಲ್ಲಿ ಚಂದ್ರು ಅವರ ದೌರ್ಬಲ್ಯ ಏನು ಎಂಬ ಪ್ರಶ್ನೆಗೆ ಡ್ರಿಂಕ್ಸ್ ಅಂತ ಹೇಳಿ ತಪ್ಪು ಸಂದೇಶ ನೀಡಿದರು ಎಂದೆನಿಸಿತು.

ಗಣ್ಯರು, ಪ್ರತಿಷ್ಠಿತರು ಮದ್ಯಪಾನ ಮಾಡುವಾಗ ನಮ್ಮದೇನು ಮಹಾಪರಾಧ ಎಂದು ಸಾಮಾನ್ಯರು ಭಾವಿಸಬಹುದು. ಮುಖ್ಯಮಂತ್ರಿ ಚಂದ್ರು ಅವರಿಗೆ ಸತ್ಯವನ್ನೇ ಹೇಳಿದ್ದೇನೆ ಎನ್ನುವ ಹೆಮ್ಮೆ ಇರಬಹುದು. ವೀಕ್ಷಕರಿಗೆ ಋಣಾತ್ಮಕ ಅಂಶವನ್ನೇ ರವಾನೆ ಮಾಡಿತು ಎನ್ನುವುದಂತೂ ನಿಜ. ಕಾರ್ಯಕ್ರಮ ಪ್ರಸಾರ ಮಾಡುವಾಗ ಟೀವಿ ಸಂಪಾದಕ ಮಂಡಳಿ ಇಂತಹ ವಿಷಯವನ್ನು ಸಮರ್ಪಕವಾಗಿ ಸಂಕಲನ ಮಾಡುವುದರಿಂದ ಆ ತಪ್ಪನ್ನು ಸರಿದೂಗಿಸಬಹುದು. 'ಮಣ್ಣು ತಿಂದರೂ ಮರೆಯಲ್ಲಿ ತಿನ್ನಬೇಕು' ಎನ್ನುವ ನಾಣ್ಣುಡಿಯಿದೆ. ಇದನ್ನು ಪಾಲನೆ ಮಾಡುವುದು ಸಾಮಾಜಿಕ ಹಿತದೃಷ್ಟಿಯಿಂದ ಒಳ್ಳೆಯದು.

—ಮಲ್ಲಿಕಾರ್ಜುನ ಸುರಧೇನುಪುರ



## ಶ್ರಾವಣ ಸಂಭ್ರಮದ ಹಸುರು

ಝೀ ಕನ್ನಡದ 'ನಾವು ನಮ್ಮವರು' ಕಾರ್ಯಕ್ರಮದಲ್ಲಿ ಮೂಡಿಬಂದ ಶ್ರಾವಣ ಸಂಭ್ರಮ ಚೆನ್ನಾಗಿತ್ತು. ರಕ್ಷಾ ಬಂಧನವೂ ವಿಶೇಷ ಎಂದು ಅನ್ನಿಸಿತು. ವೇದಿಕೆಯಲ್ಲಿ ಉತ್ತರ ಕರ್ನಾಟಕದ ಮಂದಿ ಬಂದು ಹಬ್ಬವನ್ನು ಆಚರಿಸಿದರು. ಲವಲವಿಕೆಯಿಂದ ಹೆಜ್ಜೆಹಾಕಿದರು. ತೀರ್ಪುಗಾರರಾದ ತಾರಾ ಹಾಗೂ ಅಮೂಲ್ಯ ಉಡಿ ತುಂಬಿ ಆರತಿ ಬೆಳಗಿದರು. ಬೆಳಗಾವಿಯ ಮಹಿಳೆಯರು ಅವರಿಗೆ ಸಿಹಿಯನ್ನು ಹಂಚಿ ಸಂಭ್ರಮಪಟ್ಟರು. ಶರಣ್ ಮತ್ತು ನಿರಂಜನ್ ದೇಶಪಾಂಡೆ ಅವರನ್ನು ಗೌರವಿಸಿದ್ದೂ ಒಂದು ರೀತಿ ಚೆನ್ನಾಗಿತ್ತು.

—ಭಾರತೀ ಗಂಗಾಧರ್, ಬೆಂಗಳೂರು

## ಗ್ರಾಹಕರ ಹಕ್ಕಿನ ಪ್ರತಿಪಾದನೆ

ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು' ಅನೇಕ ತಿರುವುಗಳನ್ನು ಪಡೆದರೂ ಅದರ ಮೇಲಿನ ಕುತೂಹಲ ಮಾತ್ರ ಕುಗ್ಗಿಲ್ಲ. ಸ್ನೇಹ ಅವರ ತಾಯಿ ಸಮಾಧಿಯನ್ನು ಪೂಜಿಸುವುದರಿಂದ ಆಕೆಯ ಪತಿಗೆ ಜೀವ ಕಂಟಕ ಎದುರಾಗುವುದಿಲ್ಲ ಎಂದು ಸ್ವಾಮಿಯೊಬ್ಬರು ಭವಿಷ್ಯ ನುಡಿಯುತ್ತಾರೆ. ಅವರ ಮಾತಿನ ಮೇಲೆ ನಂಬಿಕೆ ಇಟ್ಟು ಸಮಾಧಿ ಪೂಜೆಗೆಂದು ಊರಿಗೆ ಹೊರಡಲು ಸಿದ್ಧವಾಗುತ್ತಾರೆ. ಒಬ್ಬೊಬ್ಬರು ಎಂದು ಒಂದು ತಂಡವೇ ಸಿದ್ಧವಾಗಿ ರೈಲು ಹತ್ತುತ್ತಾರೆ.

ಪ್ರಯಾಣದ ವೇಳೆ ಊಟ ಬರುತ್ತದೆ. ಅದನ್ನೇ ತೆಗೆದುಕೊಳ್ಳುತ್ತಾರೆ. ಅದು ತಿನ್ನಲು ಯೋಗ್ಯವಲ್ಲ ಎನ್ನುವುದು ಅವರಿಗೆ ಗೊತ್ತಾಗುತ್ತದೆ. ಪ್ರಶ್ನಿಸಿದರೆ ಅದನ್ನೇ ತಿನ್ನಬೇಕು ಎಂದು ಹೇಳುತ್ತಾರೆ. ಕಳಪೆ ಊಟ ಸರಬರಾಜು ಮಾಡಿದ್ದಕ್ಕೆ ಪ್ರತಿರೋಧಿಸಿದ್ದರಿಂದ ಜಗಳ ಉಂಟಾಗಿ ಕೈ ಕೈ ಮಿಲಾಯಿಸುತ್ತಾರೆ. ಅಷ್ಟರಲ್ಲಿ ರೈಲನ್ನು ನಿಲ್ಲಿಸುತ್ತಾರೆ. ಆ ಘಟನೆಯ ವಿಡಿಯೊ ವೈರಲ್ ಮಾಡುತ್ತಾರೆ. ರೈಲಿನಲ್ಲಿ ಪ್ರಯಾಣಿಕರು ಹಣ ಕೊಟ್ಟು ತಿನ್ನುವ ಆಹಾರದ ಗುಣಮಟ್ಟಕ್ಕೆ ಕನ್ನಡಿ ಹಿಡಿದಂತೆ ಈ ದೃಶ್ಯವನ್ನು ಚಿತ್ರೀಕರಿಸಿದ್ದಾರೆ. ವಾಸ್ತವಕ್ಕೆ ಹತ್ತಿರವಾಗುವಂತಹ ಇಂತಹ ಸನ್ನಿವೇಶ ಕಟ್ಟಿಕೊಟ್ಟಿದ್ದು ಸ್ವಾಗತಾರ್ಹ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಮಹಿಳೆಯರ ಬಗ್ಗೆ ಸಹಾನುಭೂತಿ ಇರಲಿ

ಸಾಮಾನ್ಯವಾಗಿ ಹಿರಿಯ ನಾಗರಿಕರಿಗೆ ತಮ್ಮ ಬೇಸರವನ್ನು ಕಳೆದುಕೊಳ್ಳಲು ಟೀವಿ ಧಾರಾವಾಹಿಗಳು ಸಹಕಾರಿಯಾಗಿವೆ. ಅದರಲ್ಲೂ ವಿಶೇಷವಾಗಿ ಮಹಿಳೆಯರೇ ಹೆಚ್ಚಿನ ಪ್ರಮಾಣದಲ್ಲಿ ಸಂಜೆಯಿಂದ ಮಲಗುವ ತನಕ ಟೀವಿ ನೋಡುತ್ತಿರುತ್ತಾರೆ. ಇತ್ತೀಚಿನ ಬಹುತೇಕ ಧಾರಾವಾಹಿಗಳಲ್ಲಿ ಮಹಿಳೆಯನ್ನು ಕೆಟ್ಟದಾಗಿ ಚಿತ್ರೀಕರಿಸುತ್ತಿದ್ದಾರೆ. ಖಳನಾಯಕಿಯನ್ನು ನೋಡಿದ ತಕ್ಷಣವೇ ಆಕೆ ದುಷ್ಟೆ ಎನ್ನುವುದು ಗೊತ್ತಾಗುತ್ತದೆ. ಆದರೆ ಪುರುಷರಲ್ಲಿ ಅಂತಹ ದುಷ್ಟತನ ಇಲ್ಲವೇ? ಕುಟುಂಬದಲ್ಲಿ ಮಹಿಳೆ ಮಾತ್ರ ಹೇಗೆ ಕೆಟ್ಟವಳು ಆಗುತ್ತಾಳೆ. ಮಹಿಳೆಯರ ಬಗ್ಗೆ ಸಹಾನುಭೂತಿ, ಪ್ರೀತಿ, ಕರುಣೆ ಉಂಟಾಗುವಂತೆ ಇರಬೇಕು ಎನ್ನುವುದು ನಮ್ಮ ನಿರೀಕ್ಷೆ.

—ಕುಸುಮ ಸುಬ್ರಮಣ್ಯಂ, ಬೆಂಗಳೂರು